**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 20 ಇಎಸ್‌ಟಿ(8) 2023

**ಆಯುಕ್ತರ ಕಛೇರಿ,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001,
ದಿನಾಂಕ:06-07-2023

## ಅಧಿಸೂಚನೆ

ವಿಷಯ: 2023-24 ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ಪ್ರಕ್ರಿಯೆಯನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ:29-01-2021 ರಂತೆ ಅಧಿಸೂಚಿಸಲಾದ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ ನಿಯಮಗಳು-2021
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ: 29-06-2021.

** ** **

ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಎ), ಸಹಾಯಕ ಪ್ರಾಧ್ಯಾಪಕರು (ಗ್ರೂಪ್-ಬಿ), ಗ್ರಂಥಪಾಲಕರು ಮತ್ತು ಕ್ರೀಡಾ & ದೈಹಿಕ ಶಿಕ್ಷಣ ನಿರ್ದೇಶಕರು) ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕರ ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ರೂಪಿಸಿ ಅಧಿಸೂಚಿಸಲಾಗಿರುತ್ತದೆ.

ವರ್ಗಾವಣೆ ನಿಯಮಗಳ ನಿಯಮ 4ರ ಉಪನಿಯಮ 1 ರಿಂದ 3ರ ಉದ್ಧೃತ ಭಾಗವು ಕೆಳಕಂಡಂತಿದೆ :

**Transfer of teaching staff by counselling in the interest of public service or on request: -** (1). The teaching staff completing minimum length of service at the place of regular posting shall be compulsorily transferred in the interest of public service through a process of counselling subject to restrictions imposed in sub rule (3). The minimum length of service to be completed at the place of present regular posting for the purpose of transfer shall be four years.

(2). The teaching staff belonging to categories 2, 3, 4 and 5 as specified in sub rule (3) may request for transfer through counselling after completion of minimum length of service at the place of present regular posting as stipulated in sub-rule (1), subject to restrictions imposed in sub-rule (3). For this purpose, the teaching staff shall apply from only one of the categories 2, 3, 4 or 5 as specified in sub rule (3) but not more than one.

(3). Restriction on transfer – The total number of transfers through counselling shall not exceed fifteen percent of the sanctioned strength of the teaching staff. Out of fifteen percent of total number of transfers, nine percent shall be earmarked for compulsory transfers in the interest of public service through counselling and remaining six percent shall be earmarked for transfers on request, as specified in table below, on completion of minimum length of service as prescribed in sub-rule (1):

| Sl. No. | Category | Percentage of transfers |
|---|---|---|
| 1. | Compulsory transfers in the interest of public service | 9 % |
| 2. | Spouse cases | 3 % |
| 3. | Cases of Widow or Single parent with children below 12 years or Women divorcee who has not re-married or teaching staff having physically dependent spouse and children who has suffered bench mark disability while serving in Indian Armed forces or Paramilitary forces. | 1 % |
| 4. | Cases of person with benchmark disabilities | 1 % |
| 5. | Serious ailment cases | 1 % |
| | Total | 15 % |

ಮೇಲ್ಕಂಡ ನಿಯಮದನ್ವಯ ಮಂಜೂರಾದ ಬೋಧಕರ ಹುದ್ದೆಗಳ ಶೇಕಡಾ 9 ರಷ್ಟು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗಳು ಹಾಗೂ ಶೇಕಡಾ 6 ರಷ್ಟು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ನಡೆಸಲು ಅವಕಾಶವಿದ್ದು, ಅದರಂತೆ ಕ್ರಮವಹಿಸಲು ಉದ್ದೇಶಿಸಲಾಗಿರುತ್ತದೆ.

ವೈದ್ಯಕೀಯ ಕಾರಣಗಳಿಗಾಗಿ ವರ್ಗಾವಣೆ ಬಯಸುವ ಬೋಧಕರು ಕಡ್ಡಾಯವಾಗಿ ತಾವು ಕರ್ತವ್ಯನಿರ್ವಸುತ್ತಿರುವ ಜಿಲ್ಲೆಯ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಸಾರ್ವಜನಿಕ ಹಿತಾಸಕ್ತಿಯಡಿ ಕಡ್ಡಾಯ ವರ್ಗಾವಣೆಗೆ ಒಳಪಡದ, ಒಂದೇ ಸ್ಥಳ/ಒಂದೇ ತಾಲ್ಲೂಕಿನಲ್ಲಿ ಕರ್ತವ್ಯನಿರ್ವಹಿಸುತ್ತಿರುವ ದಂಪತಿಗಳು ಪತಿ-ಪತ್ನಿ ಪ್ರಕರಣದಲ್ಲಿ ವರ್ಗಾವಣೆ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸಲಾಗುವುದಿಲ್ಲ.

**ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗಳು:** ವರ್ಗಾವಣೆ ನಿಯಮಗಳ ನಿಯಮ 4ರ ಉಪನಿಯಮ 3 ಮತ್ತು 4 (ಎ) ರಲ್ಲಿ ಹೇಳಿರುವ ವಿಶೇಷ ಪ್ರಕರಣಗಳಿಗೆ ಅನ್ವಯಿಸುವ ಬೋಧಕರು ಅಗತ್ಯ ದಾಖಲೆಗಳೊಂದಿಗೆ ಕಡ್ಡಾಯವಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯಗೊಳಿಸುವ ಆನ್‌ಲೈನ್ ನಮೂನೆಯಲ್ಲಿ ನಿಗದಿತ ದಿನಾಂಕದ ಒಳಗೆ **ವರ್ಗಾವಣೆ ಅರ್ಜಿ** ಸಲ್ಲಿಸುವುದು, ಕೊನೆಯ ದಿನಾಂಕದ ನಂತರ ಸಲ್ಲಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ, ಹಾಗೂ ಅಗತ್ಯ ದಾಖಲಾತಿಗಳಿಲ್ಲದ ಮನವಿಗಳನ್ನು ತಿರಸ್ಕರಿಸಲಾಗುವುದು.

**ವಿಶೇಷ ಪ್ರಕರಣಗಳ ಕೋರಿಕೆ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವರಗಳು ಕೆಳಕಂಡಂತಿದೆ.**

| Sl. No. | Category | Supporting documents |
|---|---|---|
| 1 | **Spouse case**<br>spouse of the teaching staff who is an employee of State or Central Government or nationalized banks or Government owned public sector undertaking or enterprise or corporation or board or Aided Employee of Government Aided Private Educational Institutions or State University: | 1. Certificate issued by the Employer/ Competent Authority of the spouse.<br>2. In case of Private Aided Institutions certificate issued by respective Government Authority. (BEO/DDPI/DDPU/JDTE/JDCE)<br>3. HRMS Payslip duly attested by respective Drawing officer. |

| | | |
|---|---|---|
| 2 | **Serious ailments**<br>Teaching staff or spouse or Child suffering from terminal illness or serious ailment for which medical treatment is not available at the place of work of teaching staff and the transfer of teaching staff is necessary to a place where such treatment is available. | Certificate from the District Medical Board Specifying the nature of ailment, stating the fact that the required treatment is not available at his place of work.<br><br>Certificate should be duly signed by members and chairperson of the respective District Medical Board. |
| 3 | a. Widow | 1. Death certificate of the spouse<br>2. Affidavit regarding not having remarried. |
| | b. Single parent with children below 12 years | • Affidavit regarding dependent children<br>• Attested documents for certifying age of children<br>(Birth Certificate/Aadhaar Card / e-Aadhaar letter downloaded from UIDAI website/Passport) |
| | c. Case of divorcee who has not re-married | • Court decree and Affidavit regarding not having remarried.<br>• In case of Muslims Khula-Naama or Talaq-Naama or Talaq-e-mubarat issued by Masjid Committee and Affidavit regarding not having remarried. |
| 4 | Teaching staff having physically dependent spouse and children who has suffered bench mark disability while serving in Indian Armed forces or Paramilitary forces. | Affidavit regarding dependent Spouse and children: Certificate from the commanding officer or the Director, Sainik Welfare Board. |
| 5 | Person with bench mark disabilities (Having disability of 40% or more) | • Certificate from (Unique Disability ID) Department of Empowerment of Persons with Disabilities, Ministry of Social Justice & Empowerment, Govt. of India<br>• Certificate from District Medical Board specifying nature and percentage of disability. |

ವರ್ಗಾವಣೆ ನಿಯಮಗಳು-2021ರ ನಿಯಮ 4 ರ ಉಪನಿಯಮ (2) ಹಾಗೂ ಉಪನಿಯಮ 4 (ಬಿ) ರಲ್ಲಿನ ವಿನಾಯಿತಿಗಳನ್ನು ಬಯಸುವ ಬೋಧಕರು ಅಗತ್ಯ ಮಾಹಿತಿಗಳೊಂದಿಗೆ ಮನವಿಗಳನ್ನು ಕಡ್ಡಾಯವಾಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯಗೊಳಿಸುವ ಆನ್‌ಲೈನ್ (Online) ನಮೂನೆಯಲ್ಲಿ **ವರ್ಗಾವಣೆ ವಿನಾಯಿತಿ ಅರ್ಜಿ** ಸಲ್ಲಿಸುವುದು. ಕೊನೆಯ ದಿನಾಂಕದ ನಂತರ ಸಲ್ಲಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಅಪೂರ್ಣ/ಅಗತ್ಯ ದಾಖಲಾತಿಗಳಿಲ್ಲದ ಮನವಿಗಳನ್ನು ತಿರಸ್ಕರಿಸಲಾಗುವುದು.

## ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯಿಂದ ವಿನಾಯಿತಿ ಕೋರಿ ಸಲ್ಲಿಸುವ ಅರ್ಜಿಗಳೊಂದಿಗೆ ಲಗತ್ತಿಸಬೇಕಾದ ದಾಖಲಾತಿ

| Sl. No. | Exemption claim | Supporting documents |
|---|---|---|
| 1 | Less than two years of service for superannuation | Certificate issued by the Principal as per service register. |
| 2 | Undertaking a project sanctioned by the UGC, CSIR, DST and any other Government body or any statutory agency | Certified copy of the Project Sanction Letter issued by the concerned agency. |
| 3 | Research guide in Government Engineering College with Research Centre. | Certified copy of the Guideship Letter issued by University.<br>Certified copy of the letter issued by University for college having recognised as Research Centre.<br>Certified copies of PhD/ MPhil Registration of Students pursuing research. |
| 4 | NCC officer in Government Engineering College and Government Polytechnic. | Certified copy of the letter issued by the respective N.C.C Commandant. |
| 5 | Office bearer of Karnataka Government College Teachers Association | Certified copy of the letter issued by the concerned officer for having elected as office bearer of recognized state level Association. |

## <u>ವರ್ಗಾವಣೆ ಕೌನ್ಸಿಲಿಂಗ್‌ನ ತಾತ್ಕಾಲಿಕ ವೇಳಾಪಟ್ಟಿ:</u>

| ಕ್ರ. ಸಂ. | ವಿವರ | ದಿನಾಂಕ: |
|---|---|---|
| 01 | ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡಲಿರುವ ಬೋಧಕರ ವಲಯವಾರು ಪಟ್ಟಿ ಪ್ರಕಟಣೆ ಹಾಗೂ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಜಿ ಆಹ್ವಾನ. | 06-07-2023 |
| 02 | ವರ್ಗಾವಣೆ ನಿಯಮಗಳ ನಿಯಮ 4ರ ಉಪನಿಯಮ (2) ಮತ್ತು (4) (ಎ) ರಲ್ಲಿನ ಅವಕಾಶಗಳಂತೆ ವಿಶೇಷ ಪ್ರಕರಣಗಳ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 12-07-2023 |
| | ವರ್ಗಾವಣೆ ನಿಯಮಗಳ ನಿಯಮ 4ರ ಉಪನಿಯಮ (2) ಮತ್ತು (4) (ಎ) ರಲ್ಲಿನ ಅವಕಾಶಗಳಂತೆ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯಿಂದ ವಿನಾಯಿತಿಗಾಗಿ ಮನವಿ ಸಲ್ಲಿಸಲು ಕೊನೆಯ ದಿನಾಂಕ. | |
| 03 | ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆ ಹಾಗೂ ವಿಶೇಷ ಪ್ರಕರಣಗಳ ತಾತ್ಕಾಲಿಕ ವರ್ಗಾವಣಾ ಆದ್ಯತಾ ಪಟ್ಟಿ ಪ್ರಕಟಣಾ ದಿನಾಂಕ. | 19-07-2023 |
| 04 | ತಾತ್ಕಾಲಿಕ ವರ್ಗಾವಣಾ ಆದ್ಯತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ. | 21-07-2023 |
| 05 | ವಿಶೇಷ ಪ್ರಕರಣಗಳ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಅಂತಿಮ ವರ್ಗಾವಣೆ ಆದ್ಯತಾ ಪಟ್ಟಿ ಮತ್ತು ಕೌನ್ಸಿಲಿಂಗ್ ಮೂಲಕ ಭರ್ತಿ ಮಾಡಲು ಖಾಲಿ ಹುದ್ದೆಗಳ ಪಟ್ಟಿ ಪ್ರಕಟಣೆ. | 24-07-2023 |
| 06 | ವಿಶೇಷ ಪ್ರಕರಣಗಳ 1st Round ಕೌನ್ಸಿಲಿಂಗ್ (ವಿವರವಾದ ವೇಳಾಪಟ್ಟಿಯನ್ನು, ಅಂತಿಮ ವೇಳಾಪಟ್ಟಿ ಪ್ರಕಟಣೆ ನಂತರ ಪ್ರಕಟಿಸಲಾಗುವುದು) | 25-07-2023 |

| | | |
|---|---|---|
| 07 | ವಿಶೇಷ ಪ್ರಕರಣಗಳ 2nd Round ಕೌನ್ಸಿಲಿಂಗ್ (ವಿವರವಾದ ವೇಳಾಪಟ್ಟಿಯನ್ನು ಅಂತಿಮ ವೇಳಾಪಟ್ಟಿ ಪ್ರಕಟಣೆ ನಂತರ ಪ್ರಕಟಿಸಲಾಗುವುದು) | 26-07-2023 |
| 08 | ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆ ಕೌನ್ಸಿಲಿಂಗ್ (ವಿವರವಾದ ವೇಳಾಪಟ್ಟಿಯನ್ನು ಅಂತಿಮ ವೇಳಾಪಟ್ಟಿ ಪ್ರಕಟಣೆ ನಂತರ ಪ್ರಕಟಿಸಲಾಗುವುದು) | 27-07-2023 ರಿಂದ 28-07-2023 |

**ವರ್ಗಾವಣೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕಾಲಕಾಲಕ್ಕೆ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.**

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು :**

1. ಮಾನ್ಯ ಆಯುಕ್ತರ ಆಪ್ತ ಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ.
3. ಜಂಟಿ ನಿರ್ದೇಶಕರು (ಆಡಳಿತ) ಆಪ್ತ ಶಾಖೆಗೆ.
4. ಇ- ಆಡಳಿತ ವಿಭಾಗಕ್ಕೆ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.
5. ಕಛೇರಿ ಪ್ರತಿ.